# KANNADA CODE NO. 115

## CLASS XII : ( 2019– 2020)

## MARKING SCHEME

## SUBJECT : KANNADA 2019 – 20

**TIME : 3 HOURS** **MARKS : 100**

---

**ಸೂಚನೆಗಳು : 1. ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.**

---

## Section – A Grammar : 25 Marks

**ವಿಭಾಗ – ಎ (ವ್ಯಾಕರಣ) : 25 ಅಂಕಗಳು**

**ಪ್ರಶ್ನೆ 1. ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.** **1**

ರಾಮನು ಪೇಟೆಗೆ ಹೋದನೆ?/ಹೋದನಾ?

**ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ.** **1**

ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಲಿಲ್ಲ.

**ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.** **2**

ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋದನು. ಆದರೂ ಆತ ಅವನಿಗೆ ಸಿಗಲಿಲ್ಲ.

**ಈ) ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.** **1**

ಕುಮಾರನು ಓಟದ ಪಂದ್ಯದಲ್ಲಿ ಓಡುವನು.

**ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.** **1**

ಹಿಡಿ, ಕಟ್ಟು.

**ಪ್ರಶ್ನೆ 2. ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ.** **5**

ಸ್ವಾವಲಂಬನೆ ಎನ್ನುವುದು ಪ್ರತಿಯೊಬ್ಬರಿಗೂ ಅತಿಅಗತ್ಯವಾಗಿದೆ. ವಿಶೇಷತಃ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಂತಹ ಭಾರತ ದೇಶಕ್ಕೆ ಇದು ಇಂದಿನ ಅಗತ್ಯವಾಗಿದೆ. ತಂತ್ರಜ್ಞಾನ, ಉದ್ಯೋಗ, ಆರ್ಥಿಕ ಸಹಾಯವೇ ಮೊದಲಾದವುಗಳಿಗಾಗಿ ನಾವು ಪರದೇಶಗಳನ್ನವಲಂಬಿಸಿದ್ದೇವೆ. ಭಾರತ ಸಾವಿರಾರು ಕೋಟಿ ರೂಪಾಯಿಗಳ ವಿದೇಶೀ ಸಾಲವನ್ನು ಹೊಂದಿದೆ. ಇದು ನಮ್ಮ ಅರ್ಥವ್ಯವಸ್ಥೆಯ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತಿದೆ. ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ಕೇವಲ ಬಡ್ಡಿ ಕಟ್ಟಲು ಕೊಡುತ್ತಿದ್ದೇವೆ. ಅದೇ ಹಣವನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿದ್ದರೆ ಭಾರತ ಎಂದೋ ಅಭಿವೃದ್ಧಿ ಹೊಂದಿಬಿಡುತ್ತಿತ್ತೇನೋ? ಈ ಹಿನ್ನೆಲೆಯಲ್ಲಿಯೇ ಭಾರತ ಸರ್ಕಾರ ಈಗ "ಮೇಕ್ ಇನ್ ಇಂಡಿಯಾ" ಯೋಜನೆಯನ್ನು ಆರಂಭಿಸಿದೆ. ನಿಜವಾಗಿಯೂ ಇದೊಂದು ಉತ್ತಮ ಯೋಜನೆಯಾಗಿದೆ. ಇದರಿಂದ ಯುವಜನತೆಗೆ ಉದ್ಯೋಗ ಸಿಗುತ್ತದೆ. ಇದರಿಂದ ಪ್ರತಿಭಾ ಪಲಾಯನ ತಪ್ಪುತ್ತದೆ. ಆದರೆ ಜನತೆ ಸರ್ಕಾರದ ಈ ಉದ್ದೇಶವನ್ನು ಅರ್ಥ ಮಾಡಿಕೊಂಡು ಅದರ ಯಶಸ್ಸಿಗೆ ಶ್ರಮಿಸಲು ಮುಂದೆ ಬರಬೇಕು. ಆಗ ಮಾತ್ರ ಇದು ಯಶಸ್ವಿಯಾಗಬಲ್ಲದು.

**ಪ್ರಶ್ನೆ 3. ಬೇಕಾದ ಎರಡಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ತಿಳಿಸಿ. 2½x2=5**

U U U U /U U -- / U U -- /
1. ಕ ದ ಡಿ ದ ಸ ಲಿ ಲಂ ತಿ ಳಿ ವಂ
U U --/ -- -- / U U U U/U U U U/ -- --
ದ ದೆ ತ ನ್ನಿಂ ತಾ ನೆ ತಿ ಳಿ ದ ದ ಶ ವ ದ ನಂ ಗಾ
ಇದು 'ಕಂದ' ಪದ್ಯದ ಛಂದಸ್ಸು.

-- U /-- U U/U U U /--U U/
1. ಇ ನ್ನು ಹು ಟ್ಟ ದೆ ಯಿ ರ ಲಿ ನಾ ರಿ ಯ
-- U/U U -- / U U U / U U U U /
ರೆ ನ್ನ ವೊ ಲು ಭಂ ಗಿ ತ ರು ಭು ವ ನ ದೊ
--U / U U U U /-- U / -- U U / -- U / -- U U / --
ಳಿ ನ್ನು ಜ ನಿ ಸ ಲು ಬೇ ಡ ಗಂ ಡ ರು ಭೀ ಮ ಸ ನ್ನಿ ಭ ರು
ಇದು ಭಾಮಿನಿ ಷಟ್ಪದಿಯ ಛಂದಸ್ಸು.

ಸಗಣ ಭಗಣ ರಗಣ ನಗಣ ಮಗಣ ಯಗಣ ಲ ಗು
U U -- /-- U U/-- U -- /U U U/-- -- -- /U -- -- /U -- /
2. ಅ ರೆ ಯಂ ಸೀ ಳು ವೊ ಡಾ ನೆ ಮೆ ಟ್ಟ ಲ ಹು ದೇ ಚಾ ಣಂ ಗ ಳಿಂ ದ ಲ್ಲ ದೇ
ಇದು ಮತ್ತೇಭವಿಕ್ರೀಡಿತ ವೃತ್ತದ ಛಂದಸ್ಸು.

**ಪ್ರಶ್ನೆ 4. ಕೆಳಗಿನವುಗಳಲ್ಲಿ ಯಾವ್ಯದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ. 4x1=4**

ಗಾದೆಯ ಅಂಕ ನೀಡಿಕೆ ಹೀಗಿದೆ–ಪೀಠಿಕೆ, ಹೊರ ಅರ್ಥ–2, ಒಳ ಅರ್ಥ–2.

1. ಅಟ್ಟಕ್ಕೆ ನೆಗೆದು ಆಗಸಕೆ ನೆಗೆ : ಹೊರಾರ್ಥ : ಯಾರೂ ಒಮ್ಮೆಲೆ ಆಗಸಕ್ಕೆ ಜಿಗಿಯಲು ಆಗುವುದಿಲ್ಲ. ಹಂತಹಂತವಾಗಿ ಅಭ್ಯಾಸ ಮಾಡುತ್ತ ಮೇಲಕ್ಕೆ ಜಿಗಿಯಬೇಕು.
ಒಳಾರ್ಥ : ಮನುಷ್ಯ ಬದುಕಿನಲ್ಲಿ ಎಲ್ಲವನ್ನೂ ಒಂದೇ ಸಲ ಸಾಧಿಸಲಾಗುವುದಿಲ್ಲ. ಹಂತಹಂತವಾಗಿ ಸಾಧನೆಗೈಯುತ್ತ ಮೇಲಕ್ಕೆ ಹೋಗಬೇಕು.
2. ಮೂರು ವರುಷದ ಬುದ್ಧಿ ನೂರು ವರುಷದವರೆಗೆ : ಮನುಷ್ಯ ಚಿಕ್ಕಂದಿನಲ್ಲಿ ಎಂತಹ ಗುಣಗಳನ್ನು, ಸ್ವಭಾವಗಳನ್ನು ಬೆಳೆಸಿಕೊಂಡಿರುತ್ತಾನೋ ಅದೇ ಬುದ್ಧಿ ಆತ ಸಾಯುವವರೆಗೂ ಇರುತ್ತದೆ. ಹಾಗಾಗಿ ಚಿಕ್ಕಂದಿನಲ್ಲೇ ಒಳ್ಳೆಯ ಗುಣಸ್ವಭಾವ ರೂಢಿಸಿಕೊಂಡು ಉತ್ತಮ ವ್ಯಕ್ತಿಯಾಗಿ ಬಾಳಬೇಕು.
3. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು: ಮನುಷ್ಯನಿಗೆ ನಾಲಿಗೆ ಬಹಳ ಮುಖ್ಯ. ಅದು ಚೆನ್ನಾಗಿದ್ದರೆ ಆತನ ಪಾಲಿಗೆ ಜಗತ್ತೂ ಕೂಡ ಚೆನ್ನಾಗಿಯೇ ಇರುತ್ತದೆ. ಕೆಟ್ಟ ಮಾತನ್ನಾಡಿದರೆ ಜಗತ್ತೂ ಕೂಡ ನಮಗೆ ಕೆಟ್ಟದ್ದನ್ನೇ ಪ್ರತಿಯಾಗಿ ಕೊಡುತ್ತದೆ, ಒಳ್ಳೆಯ ಮಾತನ್ನಾಡಿದರೆ ಒಳ್ಳೆಯದನ್ನೇ ಕೊಡುತ್ತದೆ. ಆದ್ದರಿಂದ ಯಾವಾಗಲೂ ಒಳ್ಳೆಯ ಮಾತುಗಳನ್ನೇ ಆಡಬೇಕು. ಆಗ ಇಡೀ ಜಗತ್ತೇ ನಮ್ಮ ಪಾಲಿಗೆ ಒಳ್ಳೆಯದಾಗಿರುತ್ತದೆ.

**ಪ್ರಶ್ನೆ 5. ಕೆಳಗಿನ ಪ್ರಶ್ನೆಗಳಿಗೆ ನಿರ್ದೇಶಿಸಿರುವಂತೆ ಉತ್ತರಿಸಿ. ½ x 4=2**

**1. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

1. ಬಾರದಿರ್+ಎನುತುಂ 2. ಆರಿಗೆ+ಉಸುರುವೆನು+ಆರ 3. ಬೇಡುವೆನು+ಅಕಟ
4. ಮುಖ+ಅಂಬುಜವ.

**2. ಕೆಳಗಿನವುಗಳ ವಿಭಕ್ತಿ ಬರೆಯಿರಿ.** **½x 2=1**

1. ಸಪ್ತಮೀ ವಿಭಕ್ತಿ 2. ಷಷ್ಠೀ ವಿಭಕ್ತಿ.

**3. ಕೆಳಗಿನ ಪದಗಳ ತತ್ಸಮ ತದ್ಭವಗಳನ್ನು ಬರೆಯಿರಿ.** **1x2=2**

1. ವೀರ 2. ಜೋಗಿ.

## Section – B - Reading Comprehension : 10 Marks

**ವಿಭಾಗ – ಬಿ : 10 ಅಂಕಗಳು**

**ಪ್ರಶ್ನೆ 6. ಗದ್ಯಭಾಗ ಓದಿಕೊಂಡು ಅದರ ಪ್ರಶ್ನೆಗಳಿಗೆ ಉತ್ತರಿಸಿ.**

1. ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನರು ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿರಬೇಕು. **1**
2. ಆಂಗ್ಲ ಪಂಡಿತರು ತಮ್ಮ ಭಾಷೆಯನ್ನು ಬೆಳೆಸಲು ಮುಕ್ತ ಮನಸ್ಸಿನಿಂದ ಎಲ್ಲ ಭಾಷೆಗಳನ್ನೂ ಅಭ್ಯಸಿಸಿದರು.
   ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು ಮತ್ತು ಅರಳಿಸಿದರು. **1**
3. ಆಂಗ್ಲರು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದವುಗಳನ್ನು ಆ ಭಾಷೆಯ ಮುಖಾಂತರವೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. **2**
4. ದೇಶದ ಸಂಸ್ಕೃತಿಯನ್ನುಳಿಸಲು ಭಾರತೀಯರು ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ಸ್ವಭಾಷೆಯನ್ನು ಗೌರವಿಸಿ ಪ್ರೀತಿಸಿ ಅಭಿವೃದ್ಧಿಗೊಳಿಸಬೇಕು. **1**

**ಪ್ರಶ್ನೆ 7. ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **5**

ಕತ್ತೆ ಎಂದಾದರೂ ನಮ್ಮನ್ನು ಒದ್ದರೆ ನಾವು ಅದಕ್ಕೆ ಮರಳಿ ಒದೆಯಲು ಹೋಗಬಾರದು. ಹಾಗೆ ಒದ್ದರೆ ನಮಗೇ ಹೆಚ್ಚಿನ ನೋವುಂಟಾಗುತ್ತದೆ. ನೀರಿಗಾಗಿ ಹತ್ತಾರು ಕಡೆಗಳಲ್ಲಿ ಸ್ವಲ್ಪ ಸ್ವಲ್ಪ ಅಗೆದರೆ ನೀರು ಸಿಗುವುದಿಲ್ಲ. ಅದರ ಬದಲಿಗೆ ಒಂದೇ ಕಡೆಯಲ್ಲಿ ಹತ್ತಡಿಯಷ್ಟು ಅಗೆದರೆ ನೀರು ಸಿಗುತ್ತದೆ. ಹಾಗೆಯೇ ಬದುಕಿನಲ್ಲೂ ಕೂಡ ಒಂದು ವಿಷಯದತ್ತ ಪೂರ್ಣ ಗಮನ ಕೊಟ್ಟಾಗ ಮಾತ್ರ ಸಾಧನೆ ಸಾಧ್ಯ. ದಿನದ ಸಮಯವನ್ನು ವ್ಯರ್ಥಗೊಳಿಸಬಾರದು. ಹಾಗೆ ಮಾಡಿದರೆ ಸೂರ್ಯ ನಮ್ಮ ಮೇಲೆ ಸಿಟ್ಟು ಮಾಡಿಕೊಳ್ಳುತ್ತಾನೆ. ಹಾಗಾಗಿ ದಿನವನ್ನು ವ್ಯರ್ಥಗೊಳಿಸಬಾರದು. ಮಳೆಗಾಲದಲ್ಲಿ ನೀನು ಹಾಡುವುದಿಲ್ಲವೇ ಎಂದು ಕೋಗಿಲೆಯನ್ನು ಬಕಪಕ್ಷಿ ಕೇಳಿತು. ಆಗ ಕೋಗಿಲೆ ಕಪ್ಪೆಗಳು ವಟಗುಟ್ಟುವಾಗ ಸುಮ್ಮನಿರುವುದೇ ಲೇಸು ಎನ್ನುತ್ತದೆ. ಎಲ್ಲಿ ನಮ್ಮ ಮಾತಿಗೆ ಬೆಲೆ ಇರುವುದಿಲ್ಲವೋ ಅಲ್ಲಿ ಸುಮ್ಮನಿರುವುದೇ ಮೇಲು. ಇದು ಈ ಪದ್ಯದ ಸಾರಾಂಶವಾಗಿದೆ.

## Section – C - Writing : 15 Marks

**ವಿಭಾಗ – ಸಿ : 15 ಅಂಕಗಳು**

**ಪ್ರಶ್ನೆ 8. ಒಂದನ್ನು ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ.** **5**

ಇದಕ್ಕೆ ಅಂಕ ನೀಡಿಕೆ ಹೀಗಿದೆ : ಪೀಠಿಕೆ–½, ವಿಷಯ ವಸ್ತುವಿಗೆ– 2, ಭಾಷಾಶೈಲಿ–1, ಉಪಸಂಹಾರ–½, ಭಾಷೆ ಬಳಸಿದ ಪದಗಳಿಗೆ–1.



**ಪ್ರಶ್ನೆ 9. ಹಾಳಾಗಿರುವ ರಸ್ತೆ ಸರಿಪಡಿಸುವಂತೆ ಕೋರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಒಂದು ಪತ್ರ.** **5**

ಪತ್ರಕ್ಕೆ ಅಂಕ ನೀಡಿಕೆ ಹೀಗಿದೆ : ಇಂದ/ಸ್ಥಳ–1, ಮಾನ್ಯರೇ, ವಿಷಯ–1, ಪತ್ರದ ಒಡಲು–1½, ಮುಕ್ತಾಯ, ಸಹಿ–½, ಭಾಷೆ, ಬಳಸಿದ ಪದಗಳಿಗೆ–1.

**ಪ್ರಶ್ನೆ 10. ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ.** **5**

ಪ್ರಪಂಚದಲ್ಲಿ ಕೇವಲ ಒಂದಕ್ಕೆ ಮಾತ್ರ ಗಮನ ಕೊಟ್ಟು ಮತ್ತೊಂದಕ್ಕೆ ಗಮನ ಕೊಡದಿದ್ದರೆ ನಂತರ ದುಃಖಿಸಬೇಕಾಗುತ್ತದೆ. ಉದಾಹರಣೆಗೆ ಒಬ್ಬ ಕ್ರೀಡಾಪಟುವಿನ ದೇಹ ಸುಸ್ಥಿರವಾಗಿರುತ್ತದೆ. ಆದರೆ ಆತ ತನ್ನ ಮನಸ್ಸನ್ನು ಕೂಡ ಆರೋಗ್ಯಕರವಾಗಿಡಬೇಕಾಗುತ್ತದೆ. ಹೀಗೆ ಮಾಡದಿದ್ದರೆ ದೇಹ ಸ್ಥಿರವಾಗಿದ್ದರೂ ಮನಸ್ಸಿನ ಕಾರಣದಿಂದ ಜೀವನದಲ್ಲಿ ಆತ ಯಶಸ್ಸನ್ನು ಕಾಣಲಾರ.

ಭಾರತೀಯರಾದ ನಾವು ಆಧ್ಯಾತ್ಮದಲ್ಲಿ ಹೆಚ್ಚಿನದನ್ನು ಸಾಧಿಸಿದ್ದೇವೆ. ಆದರೆ ವ್ಯಾವಹಾರಿಕವಾಗಿ ಪರದೇಶದವರಷ್ಟು ಮುಂದುವರಿದಿಲ್ಲ. ಪರದೇಶಗಳಲ್ಲಿನ ಜನ ವ್ಯವಹಾರ ಹಾಗೂ ವಿಜ್ಞಾನದಲ್ಲಿ ಹೆಚ್ಚಿನ ಸಾಧನೆ ಮಾಡಿದರು. ಆದರೆ ಆಧ್ಯಾತ್ಮದಲ್ಲಿ ಅವರು ಹಿಂದುಳಿದರು. ಆದರೆ ಆಧ್ಯಾತ್ಮ ಮತ್ತು ವಿಜ್ಞಾನಗಳೆರಡೂ ಸೇರಿದರೆ ಮಾತ್ರ ನಮ್ಮ ಜೀವನ ಆನಂದಮಯವಾಗುತ್ತದೆ. ಕೇವಲ ಜ್ಞಾನ ಮನಸ್ಸನ್ನು ಶುದ್ಧ ಮಾಡದು. ಶುದ್ಧತೆಯತ್ತ ನಾವು ಗಮನ ಹರಿಸಬೇಕು.

## Section – D - Literature : Prose : 15 Marks

### ವಿಭಾಗ ಡಿ – (ಪಠ್ಯಗಳ ಅಧ್ಯಯನ) : ಗದ್ಯಭಾಗ : 15 ಅಂಕಗಳು

**ಪ್ರಶ್ನೆ 11. ಕೆಳಗಿನವುಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** **1x4=4**

1. ಬಸಲಿಂಗ ಕೊನೆಗೆ ಸುಳ್ಳುಗಳಿಂದ ಮುಕ್ತನಾಗಿದ್ದ.
2. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಸಿಂಹಬಾಲದ ಕೋತಿಗಳು.
3. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ದ್ವೀಪಜೀವಿಗಳಾಗುತ್ತಾರೆ.
4. ಧಣಿ ಎಂದಿಗೂ ಒಕ್ಕಲ ಮಕ್ಕಳನ್ನು ನಂಬುವುದಿಲ್ಲ.
5. ವಿಜ್ಞಾನದ ಅಡಿಪಾಯ ಪ್ರಶ್ನೆ ಕೇಳುವುದು.

**ಪ್ರಶ್ನೆ 12. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ)** **2x2=4**

1. ಮುದ್ದಣ ಮನೆಗೆ ಬರುತ್ತಿರುವುದನ್ನು ಮನೋರಮೆ ದೂರದಿಂದಲೇ ನೋಡಿದಳು. ಎದ್ದು ಬಂದು ಆತನನ್ನು ಇದಿರುಗೊಂಡು, ಕಾಲಿಗೆ ನೀರನ್ನು ಕೊಟ್ಟಳು. ನಂತರ ಕೈಹಿಡಿದು ಮನೆಯೊಳಗೆ ಕರೆದುಕೊಂಡು ಹೋಗಿ, ಮಣೆಯಿತ್ತು ಕುಳ್ಳಿರಿಸಿದಳು. ನಂತರ ಸಿಹಿಯಾದ ಹಣ್ಣುಗಳನ್ನು ತಿನ್ನಲು ಕೊಟ್ಟು, ಕೆನೆಹಾಲನ್ನು ಕುಡಿಯಲು ನೀಡಿದಳು. ಹೀಗೆ ಮುದ್ದಣನನ್ನು ಮನೋರಮೆ ಉಪಚರಿಸಿದಳು.
2. ಊರಿಗೆ ಹೊಸದಾಗಿ ಸರ್ಕಾರಿ ಆಸ್ಪತ್ರೆಗೆ ವೈದ್ಯರು ಬಂದಿದ್ದಾರೆ. ಆದರೆ ಅವರು ಆಸ್ಪತ್ರೆಯಲ್ಲಿ ಔಷಧಿಗಳನ್ನು ಕೊಡುವುದಿಲ್ಲ. ಅದರ ಬದಲಿಗೆ ಪ್ರಿಸ್ಕ್ರಿಪ್ಶನ್ ಮಾತ್ರ ಬರೆದುಕೊಡುತ್ತಾರೆ. ಕೇವಲ ಚೀಟಿ ಬರೆದುಕೊಡುವುದರಿಂದ ಏನು ಪ್ರಯೋಜನ ಎನ್ನುವುದು ಹಳ್ಳಿಗರ ಆಕ್ಷೇಪದ ವಿಷಯ.
3. ನಾವು ಬಯಸಿದ್ದು ತಕ್ಷಣ ಕೈಗೆ ಸಿಗಬೇಕು. ತಟ್ಟನೆ ಎಲ್ಲವೂ ಸರಿಹೋಗಬೇಕು. ಗಂಡನಾದವನು ಕೈತುಂಬ ಸಂಪಾದಿಸಬೇಕು. ಹೆಂಡತಿಯನ್ನು ಚೆನ್ನಾಗಿ ಇಟ್ಟುಕೊಳ್ಳಬೇಕಾದುದು ಗಂಡನ ಜವಾಬ್ದಾರಿ ಎಂಬುದು ಸೀತಾಳ ಬಯಕೆ, ನಂಬಿಕೆಗಳಾಗಿದ್ದವು.



**ಪ್ರಶ್ನೆ 13. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. ಪಾಠ : 'ಮುಟ್ಟಿಸಿಕೊಂಡವನು' ಲೇಖಕರು : ಪಿ. ಲಂಕೇಶ್

ಸಂದರ್ಭ : ಬಸಲಿಂಗ ತನ್ನ ಕಣ್ಣನ್ನು ತೋರಿಸಲು ಸರ್ಕಾರಿ ವೈದ್ಯರಾದ ಡಾ. ತಿಮ್ಮಪ್ಪನವರ ಬಳಿಗೆ ಬಂದ. ಅವನನ್ನು ಪರೀಕ್ಷಿಸಿದ ನಂತರ ಅವರು ಅವನಿಗೆ ಈ ಪ್ರಶ್ನೆಯನ್ನು ಕೇಳಿದರು.
ವಿವರಣೆ: ಬಸಲಿಂಗನ ಕಣ್ಣು ಸರಿಹೋಗಲು ಆಪರೇಶನ್ ಮಾಡಬೇಕು. ಆದರೆ ಅದಕ್ಕೆ ಬಸಲಿಂಗನ ಒಪ್ಪಿಗೆಯಿದೆಯೇ ಎಂಬುದು ಈ ಮಾತಿನ ಅರ್ಥವಾಗಿದೆ.

2. ಪಾಠ : 'ಕನ್ನಡವನ್ನು ಕಟ್ಟುವ ಕೆಲಸ' ಲೇಖಕರು : ಡಾ. ಹಾ. ಮಾ. ನಾಯಕ
ಸಂದರ್ಭ : ಕನ್ನಡ ಭಾಷೆಯನ್ನು ಹೇಗೆ ಉಳಿಸಿ ಬೆಳೆಸಬೇಕು, ಶಿಕ್ಷಣದಲ್ಲಿ ಇಂಗ್ಲೀಷ್ ಮಾಧ್ಯಮದ ಬಗ್ಗೆ ವಿವರಿಸುವ ಸಂದರ್ಭದಲ್ಲಿ ಲೇಖಕರು ಓದುಗರಿಗೆ ಈ ಮಾತನ್ನು ಹೇಳಿದ್ದಾರೆ.
ವಿವರಣೆ : ಶಿಕ್ಷಣದಲ್ಲಿ ಇಂಗ್ಲೀಷ್ ಮಾಧ್ಯಮ ಒಳ್ಳೆಯದಲ್ಲ. ಅದನ್ನು ಒಂದು ಭಾಷೆಯನ್ನಾಗಿ ಮಾತ್ರ ಓದಬೇಕೇ ಹೊರತು ಅದೇ ಮಾಧ್ಯಮವಾಗಬಾರದು. ನಮ್ಮ ಭಾಷೆಯಲ್ಲಿ ಓದಿದ್ದೇ ನಮಗೆ ಸರಳವಾಗಿ ಅರ್ಥವಾಗಿ ಮನದಲ್ಲಿ ಇರುತ್ತದೆ ಎಂಬುದು ಈ ಮಾತಿನ ಅರ್ಥವಾಗಿದೆ.

**ಪ್ರಶ್ನೆ 14. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಕಳೆದು ಹೋಗಿದ್ದ ಬೆಳ್ಳಿಲೋಟ ಹೂಳು ತುಂಬಿದ ಮಣ್ಣಿನಲ್ಲಿ ಮತ್ತೆ ಸಿಕ್ಕಿತು. ಆದರೆ ಬೆಳ್ಳಿಲೋಟ ಕಳವಿನ ಅಪವಾದವನ್ನು ಕುದುಪನ ಮೇಲೆ ಹೊರಿಸಲಾಗಿತ್ತು. ಅದಕ್ಕಾಗಿ ಕುದುಪನ ಮನೆಯವರನ್ನೆಲ್ಲ ಹಂಗಿಸುತ್ತಿದ್ದರು ಮತ್ತು ಅದೇ ಕಾರಣಕ್ಕಾಗಿ ಅವರನ್ನೆಲ್ಲ ಇನ್ನಷ್ಟು ಕೀಳಾಗಿ ಕಾಣುತ್ತಿದ್ದರು. ಅದಕ್ಕಾಗಿ ಧಣಿಗಳು ಕುದುಪನ ಮಗನನ್ನು ಮರಕ್ಕೆ ಕಟ್ಟಿ ಹೊಡೆದಿದ್ದರು. ಆದರೆ ಈಗ ಅದು ಧಣಿಗಳ ಎದುರೇ ಹೊಳೆಯ ಹೂಳು ತೆಗೆಯುವಾಗ ಮತ್ತೆ ಸಿಕ್ಕಿತು. ಆಗ ಕುದುಪ ಮತ್ತು ಚಿನ್ನಮ್ಮ ಧಣಿಗಳನ್ನು ತಿರಸ್ಕಾರದಿಂದ ನೋಡತೊಡಗಿದರು. ಈ ಎಲ್ಲ ಹಿನ್ನೆಲೆಯಲ್ಲಿ ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಯಿತು.
2. ರಾಷ್ಟ್ರಪತಿಯಾಗಿ ಆಯ್ಕೆಗೊಳ್ಳುವುದಕ್ಕೆ ಕೆಲವೇ ದಿನಗಳ ಮೊದಲು ಕಲಾಂ ಅವರು ಹೈದರಾಬಾದಿನ ಒಂದು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಬುದ್ಧಿಮಾಂದ್ಯ ಮಕ್ಕಳ ಮೆದುಳಿನಲ್ಲಿ ಅಗತ್ಯ ಮಾಹಿತಿಗಳನ್ನು ನೀಡುವ 'ಚಿಪ್' ಅಳವಡಿಸಿ ಗುಣಪಡಿಸಲು ಸಾಧ್ಯವೇ ಎಂದು ಅವರು ವೈದ್ಯರನ್ನು ಪ್ರಶ್ನಿಸಿದರು. ಅದನ್ನು ಅಳವಡಿಸಿ ಬುದ್ಧಿಮಾಂದ್ಯತೆಯನ್ನು ನಿವಾರಿಸಬಹುದೆ ಎಂದು ಕೇಳಿದರು. ವೈದ್ಯರು ಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಆಗ ಕಲಾಂ ಅವರು "ಸಾಧ್ಯವಿಲ್ಲ ಎಂದು ಹೇಳುವ ನೂರು ಕಾರಣಗಳ ಬಗ್ಗೆ ನನಗೆ ಆಸಕ್ತಿ ಇಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ಎಂಬ ಒಂದು ಕಾರಣ ಹೇಳಬಲ್ಲಿರಾ?" ಎಂದು ಕೇಳಿದರು. ಈ ಘಟನೆಯಿಂದ ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಎಂದು ಹೇಳಬಹುದು.

## Section – D - Literature : Poetry : 15 Marks

### ಪದ್ಯಭಾಗ : 15 ಅಂಕಗಳು

**ಪ್ರಶ್ನೆ 15. ಕೆಳಗಿನವುಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** **1x4=4**

1. ಮನಮನ ಬೆರೆತಲ್ಲಿ ತನು ಕರಗಬೇಕು.
2. ಪಾಂಚಾಲನಂದನೆ ದ್ರೌಪದಿ.



3. ಹುಸಿನಿದ್ದೆ ಸಾಕು ಎಂದು ಕವಿ ಮಕ್ಕಳಿಗೆ ಹೇಳುತ್ತಾರೆ.
4. ಬ್ಯಾಸಗಿ ದಿವಸಕ್ಕೆ ಬೇವಿನ ಮರ ತಂಪು.
5. ಚಿತ್ತವನ್ನು ಹತ್ತಿ ಉರಿಯುವ ಬತ್ತಿಗೆ ಹೋಲಿಸಲಾಗಿದೆ.

**ಪ್ರಶ್ನೆ 16. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ) 2x2=4**

1. ದುರ್ಜನರು ಇನ್ನೊಬ್ಬರಿಗೆ ಸ್ವಲ್ಪವೂ ಉಪಕಾರ ಮಾಡುವುದಿಲ್ಲ. ಹಾಗೆಂದು ನುಣ್ಣಗೆ, ತೋರಿಕೆಗೆ ಮಾತ್ರ ಚೆನ್ನಾಗಿ ಮಾತನಾಡುತ್ತಾರೆ. ಇಂಥವರು ಅನ್ನಕ್ಕಾಗಿ ಸೇರುವ ಕುನ್ನಿಗಳಂತೆ ಇರುತ್ತಾರೆ. ಇದು ದುರ್ಜನರ ಕಾರ್ಯದ ಬಗೆ.
2. ದನಗಳಿಗೆ ತಿನ್ನಲು ಮೇವಿಲ್ಲ. ಜನರಿಗೆ ಕುಡಿಯಲು ನೀರಿಲ್ಲ. ಅವರು ಸತ್ತ ದನಗಳ ಮಾಂಸ ತಿನ್ನುತ್ತಿದ್ದಾರೆ. ಹೀಗಾಗಿ ಅವರಿಗಾಗಿ ಏನೂ ಮಾಡಲಾಗದೆ ಕವಯಿತ್ರಿ ಮಳೆಗಾಗಿ ಪ್ರಾರ್ಥಿಸುತ್ತ ಮುಗಿಲತ್ತ ಕೈಚಾಚಿ ನಿಂತಿದ್ದಾರೆ.
3. ತಾನು ಮುದುಕನ ಜೊತೆಗೆ ಮಾತನಾಡಬೇಕು. ಮಗ, ಸೊಸೆ, ಮೊಮ್ಮಕ್ಕಳು ಮನೆಯಲ್ಲಿದ್ದರೆ ಅದಕ್ಕೆ ಅವಕಾಶವಿಲ್ಲ. ಅದಕ್ಕಾಗಿ ಅವರೆಲ್ಲ ಮನೆಯಿಂದ ಒಂದಷ್ಟು ಹೊತ್ತು ಹೊರಗೆ ಹೋಗಲಿ. ದೇವರೇ, ಅದಕ್ಕಾಗಿ ನಿನಗೆ ದಿನಕ್ಕಿಂತ ಒಂದು ಹೂ ಹೆಚ್ಚಿಗೆ ಇಡುತ್ತೇನೆ ಎಂದು ಮುದುಕಿ ದೇವರಲ್ಲಿ ಪ್ರಾರ್ಥಿಸುವಳು.

**ಪ್ರಶ್ನೆ 17. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ) 3x1=3**

1. ಪದ್ಯ : **'ಕದಡಿದ ಸಲಿಲಂ ತಿಳಿವಂದದೆ'** ಕವಿ : ನಾಗಚಂದ್ರ ಕೃತಿ : **'ರಾಮಚಂದ್ರಚರಿತ ಪುರಾಣ'**
   ಸಂದರ್ಭ : ಪ್ರಮದವನದಲ್ಲಿರುವ ಸೀತೆಯ ಪರಿಸ್ಥಿತಿಯನ್ನು ಕಂಡು ಮನಮರುಗಿದ ರಾವಣನಿಗೆ ತನ್ನ ತಪ್ಪಿನ ಅರಿವಾಗಿ ತನಗೆ ತಾನೇ ಈ ಮಾತನ್ನು ಹೇಳಿಕೊಂಡನು.
   ಅರ್ಥ : ಇಂತಹ ಪತಿವ್ರತೆಯಾದ ಸೀತೆಗೆ ಇಷ್ಟೊಂದು ದುಃಖವನ್ನು ನೀಡಿದೆನು ಎಂಬುದು ಇದರ ಅರ್ಥ. ಸೀತೆಯ ರಾಮನ ಮೇಲಿನ ಪ್ರೀತಿ, ಪತಿಭಕ್ತಿ ರಾವಣನ ಮನಸ್ಸನ್ನೂ ಕೂಡ ಬದಲಿಸಿಬಿಟ್ಟಿತು ಎಂಬುದು ಇದರ ಸ್ವಾರಸ್ಯ.
2. ಪದ್ಯ : **'ಮುಂಬೈ ಜಾತಕ'** ಕವಿ : ಜಿ. ಎಸ್. ಶಿವರುದ್ರಪ್ಪ.
   ಸಂದರ್ಭ : ಜನಸಂಖ್ಯೆ ಹೆಚ್ಚಿ ಗಿಜಿಗುಡುವ ಮುಂಬೈಯಲ್ಲಿ ತಾಯಿ ಹೇಗೆ ಎಚ್ಚರದಿಂದ ಮಗುವಿನ ಕೈಹಿಡಿದು ನಡೆಸುತ್ತಾಳೆ ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.
   ವಿವರಣೆ : ನಗರೀಕರಣದ ಬದುಕು ಅತ್ಯಂತ ಸಂಕೀರ್ಣವಾದುದು. ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಖಂಡಿತ. ಅಂಥ ಸಂದರ್ಭದಲ್ಲಿ ತಾಯಿ ಹೇಗೆ ಕಾಳಜಿಯಿಂದ ತನ್ನ ಮಗುವಿನ ಕೈಹಿಡಿದು ನಡೆಸಿ, ಬದುಕಬೇಕಾದ ರೀತಿಯನ್ನು ತಿಳಿಸಿಕೊಡುತ್ತಾಳೆ ಎಂಬುದನ್ನು ಇದು ತೋರಿಸಿಕೊಡುತ್ತದೆ.

**ಪ್ರಶ್ನೆ 18. ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ) 4x1=4**

1. ಬೇವು ಚಿಗುರಾಗಿದ್ದರೂ ಕಹಿಯೇ ಆಗಿರುತ್ತದೆ. ಚೇಳು ಚಿಕ್ಕದು ಎಂದು ಮೈಮೇಲೆ ಹಾಕಿಕೊಂಡರೆ ಅದು ಕಚ್ಚದೆ ಬಿಡುವುದೆ? ಹಾಲನ್ನು ಕೊಟ್ಟು ಸಾಕಿದರೆ ಹಾವು ವಿಷ ಕಕ್ಕುವುದಿಲ್ಲವೇ? ಗಿಳಿಯನ್ನು ಸಾಕುವೆನೆಂದು ಗೂಬೆಮರಿಯನ್ನು ತಂದು ಸಾಕಿದರೆ ಅದು ಎಂದಿಗಾದರೂ ಗಿಳಿಯಾದೀತೇ? ವೈರಿ ಬಾಲಕನಾಗಿದ್ದರೂ ವೈರಿಯೇ ಎಂಬುದನ್ನು ಮರೆಯಬಾರದು. ಬದುಕಿನಲ್ಲಿ ಈ ಎಲ್ಲ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ.



2. ಶಿಲುಬೆಗೇರಿಸಿದರೂ ಏಸುವಿನ ಮುಖದಲ್ಲಿ ಕ್ಷಮಾಭಾವವೇ ಮೂರ್ತಿವೆತ್ತಂತೆ ತೋರುತ್ತಿದೆ. ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ, ದೇವರು ನಿಮ್ಮನ್ನು ಕ್ಷಮಿಸಲಿ. ನನ್ನ ಎಡಕ್ಕೊಬ್ಬ, ಬಲಕ್ಕೊಬ್ಬನನ್ನು ತೂಗಿ ಹಾಕಿದ್ದೀರಿ. ನೀವೆಂತಹ ತಪ್ಪನ್ನು ಮಾಡುತ್ತಿದ್ದೀರಿ ಎಂಬ ಕಲ್ಪನೆಯೂ ನಿಮಗಿದ್ದಂತಿಲ್ಲ. ನಿಮ್ಮೆಲ್ಲರನ್ನೂ, ನಿಮ್ಮೆಲ್ಲರ ತಪ್ಪುಗಳನ್ನೂ ಆ ದೇವರು ಮನ್ನಿಸಲಿ. ನೀವು ಬಡಿದ ಸುತ್ತಿಗೆಗಳು, ಮಕುಟ ಹೆಣೆದ

ಮುಳ್ಳುಗಳು ಸತ್ಯವಲ್ಲ. ಹಬ್ಬಿಸಿದ ಸುಳ್ಳುಗಳು ಕಾಲದೊಳಗಿನ್ನೂ ಸೇರಿಲ್ಲ. ವೇಷ ಮರೆಸಿವೆ ಅಷ್ಟೆ. ನೀವು ಬಗೆದ ಕೇಡು ಇತ್ಯಾದಿಗಳೆಲ್ಲ ಎಂದಿಗೂ ಶಾಶ್ವತವಲ್ಲ. ದೇವರೇ, ಇವರನ್ನೆಲ್ಲ ಕ್ಷಮಿಸಿಬಿಡು ಎಂದು ಶಿಲುಬೆಗೇರಿದ ಜೀಸಸ್‌ನ ದೇಹ ಹೇಳುವಂತಿದೆ.

## Section – D - Literature : Long Prose : 12 Marks

**ದೀರ್ಘ ಗದ್ಯ (ಕೃಷ್ಣೇಗೌಡನ ಆನೆ) : 12 ಅಂಕಗಳು**

**ಪ್ರಶ್ನೆ 19. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (ಮೂರಕ್ಕೆ)** **1x3=3**

1. ನಿರೂಪಕರಿಗೆ ಗೇರ್ ಬಾಕ್ಸ್ ಬಿಚ್ಚಿ ರಿಪೇರಿ ಮಾಡುವ ಕೆಲಸ ಖಾಯಮ್ಮಾಗಿತ್ತು.
2. ಕೃಷ್ಣೇಗೌಡರ ಆನೆಯ ಹೆಸರು ಗೌರಿ.
3. ಆನೆ ರೆಹಮಾನ್ ಸಾಬಿಯ ಪೆಟ್ಟಿಗೆ ಅಂಗಡಿಯನ್ನು ದೂಡಿ ಬೀಳಿಸಿತು.
4. ಆನೆ ಇಲ್ಲದ್ದರಿಂದ ವೇಲಾಯುಧ ಶಿವೇಗೌಡರ ಸಾಮಿಲ್ಲಿನಲ್ಲಿ ಕೆಲಸಕ್ಕೆ ಸೇರಿದ.

**ಪ್ರಶ್ನೆ 20. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **2x1=2**

2. ವೇಲಾಯುಧ ದಿನದ ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ. ಇದರಿಂದ ಆತ ಮಠದ ಸಾತ್ವಿಕ ವಾತಾವರಣಕ್ಕೆ ತಲೆನೋವಾಗಿದ್ದ. ದುರ್ನಡತೆಗಾಗಿ ಅವನಿಗೆ ಛೀಮಾರಿ ಹಾಕಿ ಒಮ್ಮೆ ಓಡಿಸಿದರೂ ಆತ ತನ್ನ ನಡತೆ ಬದಲಿಸಿರಲಿಲ್ಲ. ಆದ್ದರಿಂದ ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾಗುತ್ತಿತ್ತು.
2. ಕೃಷ್ಣೇಗೌಡರ ಆನೆ ಮಠದಲ್ಲಿ ಬರೀ ಒಣಹುಲ್ಲು, ಮೊಸರನ್ನ ತಿಂದು ಸೊರಗಿಹೋಗಿತ್ತು. ಕೃಷ್ಣೇಗೌಡರ ಬಳಿಗೆ ಆನೆ ಬಂದಮೇಲೆ ಅದಕ್ಕೆ ಬಗೆಬಗೆಯ ಸೊಪ್ಪುಸದೆಗಳನ್ನು ತಂದು ಹಾಕಿದ. ಬಯನೆ ಸೊಪ್ಪು, ಹಸಿ ಹುಲ್ಲು, ಹಿಂಡಿ, ಬೆಲ್ಲ, ಗೆಣಸು ಇತ್ಯಾದಿಗಳನ್ನೆಲ್ಲ ಪ್ರತಿದಿನ ಕೊಡತೊಡಗಿದ. ಇದರಿಂದ ಸೊರಗಿದ್ದ ಆನೆ ಮೈಕೈ ತುಂಬಿಕೊಂಡು ಪೊಗದಸ್ತಾಗಿ ಬೆಳೆಯಿತು.

**ಪ್ರಶ್ನೆ 21. ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. ಆಯ್ಕೆ : ದೀರ್ಘ ಗದ್ಯ : 'ಕೃಷ್ಣೇಗೌಡನ ಆನೆ' ಲೇಖಕರು : ಪೂರ್ಣಚಂದ್ರ ತೇಜಸ್ವಿ.
   ಸಂದರ್ಭ : ಕೃಷ್ಣೇಗೌಡರ ಆನೆ ಒಮ್ಮೆ ರಹಮಾನ್ ಸಾಬಿಯ ಪೆಟ್ಟಿಗೆ ಅಂಗಡಿಯನ್ನು ದೂಡಿ ಬೀಳಿಸಿತು. ಆಗ ರಹಮಾನ್ ಸಾಬಿಗೆ ಜನರು ಈ ಮಾತನ್ನು ಹೇಳಿದರು.
   ವಿವರಣೆ : ಆನೆ ತನ್ನ ಅಂಗಡಿಯನ್ನು ಬೀಳಿಸಿದಾಗ ರಹಮಾನ್ ಅದಕ್ಕೆ ಸುಳ್ಳು ಕಾರಣ ಹೇಳಿದ. ಆಗ ಆತನ ಹೆಂಡತಿ ಆತ ಕೆಟ್ಟ ಶಬ್ದ ಬೈದಿದ್ದ ಎಂದು ಹೇಳಿದಳು. ಆಗ ಜನರು ಆನೆ ಮೂಕ ಪ್ರಾಣಿಯಾಗಿದ್ದರೂ ಅದಕ್ಕೂ ಮಾನ ಮರ್ಯಾದೆ ಇರುತ್ತದೆ ಎಂದು ಹೇಳಿದರು. ಪ್ರಾಣಿಗಳ ಕುರಿತು ಜನರಿಗಿರುವ ನಂಬಿಕೆಯನ್ನು ಇದು ತೋರಿಸಿಕೊಡುತ್ತದೆ.
3. ಆಯ್ಕೆ : ದೀರ್ಘ ಗದ್ಯ : 'ಕೃಷ್ಣೇಗೌಡನ ಆನೆ' ಲೇಖಕರು : ಪೂರ್ಣಚಂದ್ರ ತೇಜಸ್ವಿ.
   ಸಂದರ್ಭ : ಕೃಷ್ಣೇಗೌಡರ ಆನೆ ಬೇಟೆಗೆ ಫಾರೆಸ್ಟರ್ ನಾಗರಾಜ ಹೋಗುತ್ತಾನೆ. ಆತ ಅಲ್ಲಿ



ಕಣ್ಮರೆಯಾಗುತ್ತಾನೆ. ಆತನಿಗಾಗಿ ಎಷ್ಟು ಹುಡುಕಿದರೂ ಸಿಗುವುದಿಲ್ಲ. ಆತನ ಕೋವಿ ಮಾತ್ರ ದೂರದಲ್ಲಿ ಸಿಗುತ್ತದೆ. ಆಗ ಪೋಲೀಸರು ಮಹಜರು ಬರೆಯುವಾಗ ಈ ಮೇಲಿನಂತೆ ಬರೆದುಕೊಂಡರು.

ವಿವರಣೆ : ನಾಗರಾಜ ಹೇಗೆ ಸತ್ತ, ಯಾರಿಂದ, ಯಾವ ಕಾರಣಕ್ಕಾಗಿ ಸತ್ತ ಎಂಬುದು ನಿಗೂಢವಾಗಿಯೇ ಉಳಿಯಿತು. ಆಗ ಪೋಲೀಸರು ಬೇರೆ ದಾರಿ ಕಾಣದೆ ಮೇಲಿನಂತೆ ಮಹಜರು ಬರೆದುಕೊಂಡರು ಎಂಬುದು ಇದರ ಅರ್ಥವಾಗಿದೆ.

**ಪ್ರಶ್ನೆ 22. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4**x1=**4**

1. ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಅಗೆಯುವಾಗ ಅಡ್ಡಾಗುವ ಬೇರುಗಳನ್ನು ಕಡಿಯಲೆಂದು ಆ ಕೊಡಲಿ ತೆಗೆದುಕೊಂಡು ಕಲ್ಲು ಮಣ್ಣು ನೋಡದೆ ಯರ್‍ರಾಬಿರ್‍ರಿ ಜಪ್ಪಿದ್ದರು. ಹೀಗಾಗಿ ಅದರ ಹಿಂಭಾಗ ಯಾವುದು ಮುಂಭಾಗ ಯಾವುದು ಎಂದು ಗೊತ್ತಾಗುತ್ತಿರಲಿಲ್ಲ. ಅದು ಹೇಳಲಾಗದಷ್ಟು ಹಾಳಾಗಿತ್ತು, ಎಲ್ಲ ಕಡೆ ಜಜ್ಜಿ ಹೋಗಿ ಅದನ್ನು ಸುತ್ತಿಗೆ ಎಂದು ಕರೆಯಬಹುದಿತ್ತು. ಅದು ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡುಬಿಟ್ಟಿತ್ತು. ಈಗ ಅದು ಅಮೂಲ್ಯವಾದುದೇನೂ ಆಗಿರಲಿಲ್ಲ. ಆದ್ದರಿಂದ ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲ.
2. ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಆನೆಯಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದ ಆನೆ ಹಾಕಿದ ಮರಿಯೇ ಕೃಷ್ಣೇಗೌಡರ ಬಳಿಯಿದ್ದ ಆನೆ. ಅದು ಹುಟ್ಟಿದ್ದು, ಬೆಳೆದಿದ್ದು ಎಲ್ಲ ಊರಿನಲ್ಲಿ, ಜನಗಳ ನಡುವೆಯೇ. ಅದು ಮೂಡಿಗೆರೆಯ ಪೇಟೆಗೆ ಎಷ್ಟು ಒಗ್ಗಿಕೊಂಡಿತ್ತೆಂದರೆ ಯಾವ ಲಂಗುಲಗಾಮಿಲ್ಲದೆ ದನಕರುಗಳ ರೀತಿಯಲ್ಲಿ ಪೇಟೆಯೊಳಗೆ ತಿರುಗಿಕೊಂಡಿರುತ್ತಿತ್ತು. ದಾರಿ ಬದಿಯ ಪೆಟ್ಟಿಗೆ ಅಂಗಡಿಗಳವರು ಹಣ್ಣು ಖರ್ಚಾದ ಬಾಳೆಗೊನೆಗಳ ದಿಂಡುಗಳನ್ನೂ, ಸಿಪ್ಪೆಗಳನ್ನೂ, ಜಜ್ಜಿದ, ಹಾಳಾದ ಹಣ್ಣುಗಳನ್ನೂ ಅದಕ್ಕೆ ಕೊಡಲು ಇಡುತ್ತಿದ್ದರು. ಅದು ಖಾಯಮ್ಮಾಗಿ ಎಲ್ಲ ಅಂಗಡಿಗಳ ಬಳಿಗೂ ಹೋಗಿ ಅದನ್ನೆಲ್ಲ ತಿನ್ನುತ್ತಿತ್ತು. ಇದು ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಮತ್ತು ಪೇಟೆಯಲ್ಲಿ ಮಾಡುತ್ತಿದ್ದ ಕೆಲಸವಾಗಿದೆ.

## Brief outline History of Kannada Literature : Marks 08

(Major poets and poetesses)

**ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ) : 08 ಅಂಕಗಳು**

**ಪ್ರಶ್ನೆ 23. ಕೆಳಗಿನ ಯಾವುದಾದರೂ ಇಬ್ಬರು ಕವಿಗಳ ಕವಿ-ಕೃತಿ ಪರಿಚಯ ಮಾಡಿಕೊಡಿ.** **4**x2=**8**

1. **ಪುಲಿಗೆರೆ ಸೋಮನಾಥ** : ಈತ ಹದಿನಾರನೆಯ ಶತಮಾನದಲ್ಲಿದ್ದ ವೀರಶೈವ ಕವಿ. ಧಾರವಾಡ ಜಿಲ್ಲೆಯ ಪುಲಿಗೆರೆ (ಈಗಿನ ಲಕ್ಷ್ಮೇಶ್ವರ) ಈತನ ಜನ್ಮಸ್ಥಳವಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಈತನ ಕೃತಿ "ಸೋಮೇಶ್ವರ ಶತಕ". "ಹರಹರಾ ಶ್ರೀ ಚೆನ್ನ ಸೋಮೇಶ್ವರಾ' ಎಂಬುದು ಈತನ ಶತಕಗಳ ಅಂಕಿತವಾಗಿದೆ. ಕೃತಿಯ ಪ್ರತಿಯೊಂದು ಪದ್ಯವೂ ಒಂದು ಮುಕ್ತಕ, ಸ್ವಯಂಪೂರ್ಣ ಭಾವವುಳ್ಳ ಸ್ವತಂತ್ರ ಪದ್ಯಗಳಾಗಿವೆ. ಲವಲವಿಕೆಯ ಶೈಲಿ, ಉಪಮೆಗಳ ಸೊಗಸಿನಿಂದಾಗಿ ಸೋಮೇಶ್ವರ ಶತಕ ಕನ್ನಡಿಗರ ಮನ ಗೆದ್ದಿದೆ.



2. **ಮುದ್ದಣ** : ಮುದ್ದಣ ಎಂಬುದು ಲಕ್ಷ್ಮೀನಾರಾಯಣಪ್ಪ ಎಂಬ ಕವಿಯ ಕಾವ್ಯನಾಮ. ಉಡುಪಿ ಜಿಲ್ಲೆಯ ನಂದಳಿಕೆ ಎಂಬ ಗ್ರಾಮ ಈತನ ಹುಟ್ಟೂರು. ತಂದೆ ಪಾತಾಳಿ ತಿಮ್ಮಪ್ಪಯ್ಯ, ತಾಯಿ ಮಹಾಲಕ್ಷ್ಮಮ್ಮ. ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡ ಈತ ಉಡುಪಿಯ ಹೈಸ್ಕೂಲಿನಲ್ಲಿ ದೈಹಿಕ ಶಿಕ್ಷಕನಾಗಿ, ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿ ಕೆಲಸ ಮಾಡಿದನು. 'ಅದ್ಭುತ ರಾಮಾಯಣ', 'ಶ್ರೀರಾಮ

ಪಟ್ಟಾಭಿಷೇಕ', 'ರಾಮಾಶ್ವಮೇಧ' ಮುಂತಾದ ಕೃತಿಗಳನ್ನು ರಚಿಸಿರುವನು. 'ರತ್ನಾವತಿ ಕಲ್ಯಾಣ' 'ಕುಮಾರ ವಿಜಯ' ಎಂಬೆರಡು ಯಕ್ಷಗಾನ ಪ್ರಸಂಗಗಳನ್ನೂ ರಚಿಸಿದ್ದಾನೆ.

3. **ಡಾ. ಹಾ. ಮಾ. ನಾಯಕ** : ಹಾಮಾನಾ ಎಂದೇ ಪ್ರಸಿದ್ಧರು. ಪೂರ್ಣ ಹೆಸರು ಡಾ. ಹಾರೋಗದ್ದೆ ಮಾನಪ್ಪ ನಾಯಕ. ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹಾರೋಗದ್ದೆಯವರು. ಗುಲಬರ್ಗಾ ವಿ.ವಿ.ಯ ಕುಲಪತಿಗಳಾಗಿದ್ದರು. ತಮ್ಮ 'ಸಂಪ್ರತಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. 57ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಲ್ಲಾಪ, ಸಂಭ್ರಮ, ಸಂಪಣ, ಭಾರತದ ಧರ್ಮ, ಸಂಗತಿ, ಸೂಲಂಗಿ ಮುಂತಾದ ನೂರಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದ ಅವರು 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಯೂ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದು ಕನ್ನಡಿಗರ ಮನೆಮಾತಾಗಿದ್ದಾರೆ.

****************